ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-560 056

ಸಂಖ್ಯೆ ಎಸಿಎ-2/ವಿ.ವಿ.ಪ.ಸಾ ಸಭೆ/2019-20

ದಿನಾಂಕ: 22/01/2020

ಗೆ.

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-56.

ಮಾನ್ಯರೆ,

ವಿಷಯ: ದಿನಾಂಕ: 30/12/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

*****

ದಿನಾಂಕ: 30/12/2019ರಂದು ಮಧ್ಯಾಹ್ನ 3.30 ಘಂಟೆಗೆ ಜ್ಞಾನಭಾರತಿ ಆವರಣದ ಸನೆಟ್ ಸಭಾಂಗಣದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.19ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ತಮ್ಮ ವಿಶ್ವಾಸಿ,

ಕುಲಸಚಿವರು.
22/1/2020

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿಯವರು, ರಾಜ್ಯಪಾಲರಕಾರ್ಯಾಲಯ, ರಾಜಭವನ, ಬೆಂಗಳೂರು - 01.
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು - 01.
3. ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು/ಉಪಕುಲಸಚಿವರು/ಸಹಾಯಕ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು - ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸಿಎ-2/ಎ2/ವಿ.ವಿ.ಪ./ಸಾ.ಸ/2019-20

ದಿನಾಂಕ: 10-01-2020

ದಿನಾಂಕ: 30-12-2019ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಆಡಳಿತ ವಿಭಾಗದ ಸನೆಟ್ ಸಭಾಂಗಣದಲ್ಲಿ ಮಧ್ಯಾಹ್ನ 3.30 ಘಂಟೆಗೆ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ವೇಣುಗೋಪಾಲ್. ಕೆ. ಆರ್. ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಎಂ.ಜಿ. ಕೃಷ್ಣಮೂರ್ತಿ. ಪ್ರಾಂಶುಪಾಲರು | |
| 3. | ಡಾ. ಅನುರಾಧ. ಎಂ. ಪ್ರಾಂಶುಪಾಲರು | ಸದಸ್ಯರು |
| 4. | ಶ್ರೀ ಜಿ.ಆರ್. ಸುಧಾಕರ. ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀ ದೇವೇಂದ್ರ ಕುಮಾರ ಪಾಠಕ್. ಪ್ರಾಂಶುಪಾಲರು | ಸದಸ್ಯರು |
| 6. | ಶ್ರೀ ಹೆಚ್. ಆರ್. ಕುಮಾರಸ್ವಾಮಿ. ಪ್ರಾಂಶುಪಾಲರು | ಸದಸ್ಯರು |
| 7. | ಶ್ರೀ ಜಯರಾಮ. ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಸುಧಾಮಣಿ. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ವತ್ಸಲ. ಎನ್. ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ಟಿ. ಕುಮಾರ. ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಪಿ. ವಿಷ್ಣುಕಾಮತ್. ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | ಸದಸ್ಯರು |
| 12. | ಡಾ. ಮೊಹಮ್ಮದ್ ಅಫ್ಜಲ್ ಪಾಷ. ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | ಸದಸ್ಯರು |
| 13. | ಡಾ. ಎಲ್. ಗೋಮತಿದೇವಿ. ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ | ಸದಸ್ಯರು |
| 14. | ಡಾ. ಸುದೇಶ್. ಡೀನರು, ಕಾನೂನು ನಿಕಾಯ | ಸದಸ್ಯರು |
| 15. | ಡಾ. ವೈ. ನಾಗರಾಜು. ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 16. | ಡಾ. ಹಶೀನ್ ತಾಜ್ ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 17. | ಡಾ. ಪಿ. ದೀಪಾ ಶೈಣೈ. ಡೀನರು, ತಾಂತ್ರಿಕ ನಿಕಾಯ | ಸದಸ್ಯರು |
| 18. | ಶ್ರೀ ಮಧುಚಂದ್ರ, ಜಿ. | ಸದಸ್ಯರು |
| 19. | ಗ್ರಂಥಪಾಲಕರು, ಬೆಂ.ವಿ.ಬೆಂ. | ಸದಸ್ಯರು |
| 20. | ನಿರ್ದೇಶಕರು, ಪಿ.ಎಮ್.ಇ.ಬಿ, ಬೆಂ.ವಿ.ಬೆಂ. | ಸದಸ್ಯರು |
| 21. | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಬೆಂ.ವಿ.ಬೆಂ. | ಸದಸ್ಯರು |
| 22. | ನಿರ್ದೇಶಕರು, ದೈಹಿಕ ಶಿಕ್ಷಣ ನಿರ್ದೇಶನಾಲಯ | ಸದಸ್ಯರು |
| 23. | ಡಾ. ಶಿವರಾಜು. ಸಿ. ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 24. | ಶ್ರೀಮತಿ ಹೆಚ್.ಪಿ. ಪಾರ್ವತಿ. ವಿತ್ತಾಧಿಕಾರಿಗಳು | ಸದಸ್ಯರು |
| 25. | ಡಾ. ಬಿ.ಕೆ. ರವಿ. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಮೊದಲಿಗೆ ಕುಲಸಚಿವರು ಮಾತನಾಡಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಕೋರಿದರು. ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಹೊಸದಾಗಿ ನಾಮನಿರ್ದೇಶನಗೊಂಡ ಡಾ. ವತ್ಸಲ. ಎನ್. ಪ್ರಾಂಶುಪಾಲರು, ಜೈನ್ ಇನ್ಸಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಕನಕಪುರ ತಾಲ್ಲೂಕು ಹಾಗೂ ಶ್ರೀ ಟಿ. ಕುಮಾರ, ಪ್ರಾಂಶುಪಾಲರು, ಕುವೆಂಪು ಸಂಜೆ ಪದವಿ ಕಾಲೇಜು, ಮಲ್ಲಸಂದ್ರ, ಟಿ. ದಾಸರಹಳ್ಳಿ, ಬೆಂಗಳೂರು ಇವರುಗಳಿಗೆ ಹಾರ್ದಿಕ ಸ್ವಾಗತವನ್ನು ಕೋರಿ ಅಭಿನಂದಿಸಿದರು. ನಂತರ ಸಭೆಯ ಕಾರ್ಯ-ಕಲಾಪಗಳನ್ನು ನಡೆಸಿಕೊಡಲು ಮಾನ್ಯ ಕುಲಪತಿಗಳನ್ನು ಕೋರಿದರು.

ಕುಲಪತಿಗಳು ಮಾತನಾಡಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸಭೆಗೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

ವಿಷಯ ಸೂಚಿ: 1: ದಿನಾಂಕ: 04/10/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಮತ್ತು ದಿನಾಂಕ:11/11/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ದಿನಾಂಕ:04/10/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆ ಮತ್ತು ದಿನಾಂಕ:11/11/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

ವಿಷಯ ಸೂಚಿ: 2: ಸ್ವಾಯತ್ತತಾ ಕಾಲೇಜುಗಳಾದ ಜಯನಗರದ ದಿ ನ್ಯಾಷನಲ್ ಕಾಲೇಜು ಹಾಗೂ ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜಿನವರು, 2020-21ನೇ ಸಾಲಿನಿಂದ ಸ್ವಾಯತ್ತತೆ ಅಡಿಯಲ್ಲಿ ಹೊಸದಾಗಿ ಪ್ರಾರಂಭಿಸಲಿಚ್ಚಿಸಿರುವ ಕೋರ್ಸುಗಳಿಗೆ ಅನುಮತಿ ನೀಡುವ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ Specification of Degreesನ ನಾಮಾಂಕಿತಗೊಳಪಟ್ಟು, 2020-21ನೇ ಸಾಲಿನಿಂದ ಸ್ವಾಯತ್ತಾ ಕಾಲೇಜುಗಳಾದ ದಿ ನ್ಯಾಷನಲ್ ಕಾಲೇಜು, ಜಯನಗರ ಇಲ್ಲಿ ಎಂ.ಎಸ್ಸಿ (ಡ್ಯಾಟಾ ಸೈನ್ಸ್) ಮತ್ತು ಎನ್.ಎಂ.ಕೆ.ಆರ್.ವಿ. ಕಾಲೇಜು, ಜಯನಗರ ಇಲ್ಲಿ ಎಂ.ಎಸ್ಸಿ (ಪರಿಸರ ವಿಜ್ಞಾನ), ಎಂ.ಎಸ್ಸಿ (ಡ್ಯಾಟಾ ಸೈನ್ಸ್) ಮತ್ತು ಬಿ.ಕಾಂ. (ಇನ್ಸುರೆನ್ಸ್ ಅಂಡ್ ಅಕ್ಚುರಿಯಲ್ ಸ್ಟಡೀಸ್) ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

ವಿಷಯ ಸೂಚಿ: 3: Statutes Governing the Appointment of Teachers and other Academic Staff and the Measures for the Maintenance of Standards in Bangalore University and the Implementation of UGC Pay Scales revised form 01.01.2016.

ನಿರ್ಣಯ: ಮಾನ್ಯ ಕುಲಪತಿಗಳು ಮಾತನಾಡಿ, ಈ ಬಗ್ಗೆ ಈಗಾಗಲೇ ಕರಡು ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರದಿಂದ "Statutes governing the Direct Recruitment and career Advancement Scheme and Miscellaneous Provisions to implement the UGC Pay Scales revised from 01/01/2016 to Teachers, Librarians, Physical Education Directors in Bangalore University" ಶೀರ್ಷಿಕೆಯ ಬದಲಾಗಿ "Statutes Governing the Appointment of Teachers and other Academic Staff and the Measures for the Maintenance of Standards in Bangalore University and the implementation of UGC Pay Scales revised from 01/01/2016" ಎಂಬಂತೆ ಮರು ನಿರೂಪಿಸುವಂತೆ ಸೂಚಿಸಿದೆಯೆಂದು ಸಭೆಯ ಗಮನಕ್ಕೆ ತಂದರು. ಚರ್ಚೆಯ ನಂತರ ಸದರಿ ಸರ್ಕಾರದ ಸೂಚನೆಯಂತೆ ಮರು ನಿರೂಪಿಸಿರುವ ಶೀರ್ಷಿಕೆಯೊಂದಿಗೆ ಕರಡು ಪರಿನಿಯಮಾವಳಿಯನ್ನು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

ವಿಷಯ ಸೂಚಿ: 4: ಮೂರನೇ ಸೆಮಿಸ್ಟರ್‌ನ **Open Elective** ವಿಷಯದ ಆಯ್ಕೆಯ ಬಗ್ಗೆ.

ನಿರ್ಣಯ: ಚರ್ಚೆಯ ನಂತರ, ಮೂರನೇ ಸೆಮಿಸ್ಟರ್‌ನ **Open Elective** ವಿಷಯಕ್ಕೆ ಸಂಬಂಧಿಸಿದಂತೆ, ಇತಿಹಾಸ ವಿಭಾಗದ ಮುಖ್ಯಸ್ಥರ ಅಭಿಪ್ರಾಯವನ್ನು ಅನುಮೋದಿಸಲು ನಿರ್ಣಯಿಸಲಾಯಿತು.

ವಿಷಯ ಸೂಚಿ: 5: 2019–20ನೇ ಸಾಲಿಗೆ ಬೆಂಗಳೂರಿನ ಐ.ಎಫ್.ಐ.ಎಮ್. ಕಾಲೇಜಿಗೆ ಹೊಸದಾಗಿ ಸ್ವಾಯತ್ತತೆಯನ್ನು ಮಂಜೂರು ಮಾಡುವ ಸಲುವಾಗಿ ಸ್ಥಾಯಿ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

ನಿರ್ಣಯ: ಐ.ಎಫ್.ಐ.ಎಮ್. ಕಾಲೇಜಿಗೆ ಸ್ವಾಯತ್ತತೆಯನ್ನು 2019–20ನೇ ಸಾಲಿನಿಂದ ಜಾರಿಗೆ ಬರುವಂತೆ ಶಿಫಾರಸ್ಸು ಮಾಡಲಾಗಿರುವ ಸ್ಥಾಯಿ ಸಮಿತಿಯ ವರದಿಯನ್ನು ಪರಿಗಣಿಸಿ ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

ವಿಷಯ ಸೂಚಿ: 6: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡಿ ಕೆಲವೊಂದು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದು, ಅಂತಹ ವಿಷಯಗಳಲ್ಲಿ ಪರೀಕ್ಷೆ ಬರೆಯಲು ಮತ್ತೊಂದು ಅವಕಾಶ ನೀಡುವ ಬಗ್ಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ:

ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಡಾ. ವಿಷ್ಣುಕಾಮತ್‌ರವರು ಇಂತಹ ಅನುಮತಿಯನ್ನು ನೀಡಬಾರದು ಇಂತಹ ಅನುಮತಿಯಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟ ಕುಸಿಯುವುದು ಹಾಗೂ ವಿದ್ಯಾರ್ಥಿಗಳು ವಿಶ್ವವಿದ್ಯಾಲಯವನ್ನು ಲಘುವಾಗಿ ಪರಿಗಣಿಸುತ್ತಾರೆಂದು ಸಹ ತಿಳಿಸಿದರು. ಮಾನ್ಯಕುಲಪತಿಗಳು ಮಾತನಾಡಿ ಕೆಲವು ವಿದ್ಯಾರ್ಥಿಗಳು ಕಡೆಗಳಿಗೆಯಲ್ಲಿ ನ್ಯಾಯಾಲಯಕ್ಕೆ ಮೊರೆಹೋಗಿ ಪರೀಕ್ಷೆ

ಬರೆಯಲು ಆದೇಶ ತರುತ್ತಿರುವರೆಂದು ಸಭೆಗೆ ತಿಳಿಸಿದರು. ಇದರಿಂದ ಪರೀಕ್ಷೆಗಳನ್ನು ಸರಾಗವಾಗಿ ನಡೆಸಲು ತೊಂದರೆಯಾಗುತ್ತಿದೆ ಎಂದು ತಿಳಿಸಿ, ನಾವೇ ಈ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಿದ್ದಲ್ಲಿ ಈ ತೊಂದರೆಗಳು ಉದ್ಭವಿಸುವುದಿಲ್ಲವೆಂದು ಸಭೆಯ ಅವಗಾಹನೆಗೆ ತಂದರು. ಕೆಲವು ಸದಸ್ಯರು ಈ ಬಗ್ಗೆ ವ್ಯಾಪಕ ಪ್ರಚಾರ ಮಾಡುವಂತೆಯೂ ತಿಳಿಸಿದರು.

ನಂತರ ಸಭೆಯಲ್ಲಿ ಈ ಕೆಳಕಂಡ ನಿರ್ಧಾರ ಕೈಗೊಳ್ಳಲಾಯಿತು.

1. 2004ರಿಂದ ಈಚೆಗೆ ಯಾವ ವಿದ್ಯಾರ್ಥಿಯು ತಮ್ಮ ಎಲ್ಲಾ ಸ್ನಾತಕ/ಸ್ನಾತಕೋತ್ತರ ಪದವಿಯ ತರಗತಿಗಳಿಗೆ ಹಾಜರಾಗಿ, ಪರೀಕ್ಷೆಯಲ್ಲಿ ಮಾತ್ರ ಕೆಲವು ವಿಷಯಗಳಲ್ಲಿ ಅನುತ್ತೀರ್ಣವಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ, ಬರುವ *ಮೇ ಮತ್ತು ನವೆಂಬರ್* ಪರೀಕ್ಷೆಗಳನ್ನು ನಡೆಸುವ ಸಂದರ್ಭದಲ್ಲಿ ಒಂದು ಬಾರಿಗೆ ಅನ್ವಯಿಸುವಂತೆ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ನಿರ್ಣಯಿಸಲಾಯಿತು. ಹಾಗೂ ಇನ್ನು ಮುಂದೆ ಇಂತಹ ವಿದ್ಯಾರ್ಥಿಗಳಿಗೆ ಅನುಮತಿ ನೀಡಬಾರದೆಂದು ನಿರ್ಣಯಿಸಲಾಯಿತು.
2. ವಿಶ್ವವಿದ್ಯಾಲಯ ಅಂಚೆ ತೆರಪು ನಿರ್ದೇಶನಾಲಯದ **Annual Scheme** ಮುಖಾಂತರ ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿ ಪದವಿ ಪೂರೈಸಿಲ್ಲದಿರುವವರಿಗೆ ಮುಂದಿನ **Annual Scheme (DCC & DE)** ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಒಂದು ಬಾರಿಗೆ ಅನ್ವಯಿಸುವಂತೆ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಹಾಗೂ ಇದಾದನಂತರ ಇಂತಹ ವಿದ್ಯಾರ್ಥಿಗಳಿಗೆ ಅನುಮತಿ ನೀಡಬಾರದೆಂದು ನಿರ್ಣಯಿಸಲಾಯಿತು.
3. ಈ ಎಲ್ಲಾ ವಿದ್ಯಾರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ಪಠ್ಯಕ್ರಮಗಳ ಅನುಸಾರ ಮಾತ್ರ ಪರೀಕ್ಷೆ ಒಂದು ಬಾರಿ ಬರೆಯಲು ಅನುಮತಿ ನೀಡುವಂತೆ ನಿರ್ಣಯಿಸಲಾಯಿತು ಮತ್ತು ಈ ಬಗ್ಗೆ ಸಮಾನತೆಯ ವಿಷಯಗಳನ್ನು **(Equivalence Subjects)** ವಿಷಯಗಳ ವಿಭಾಗಗಳ ಡೀನರು/ಮುಖ್ಯಸ್ಥರು ಸದರಿ ವಿದ್ಯಾರ್ಥಿಗಳಿಗೆ ಲಿಖಿತ ಮುಖೇನ ತಿಳಿಸುವಂತೆಯೂ ನಿರ್ಣಯಿಸಲಾಯಿತು.

**ವಿಷಯ ಸೂಚಿ: 7: Issue of Degree Certificate and Marks Cards to all the students-reg.**

ನಿರ್ಣಯ: ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ ನಿರ್ದೇಶನದ ಅನ್ವಯ 2019ನೇ ಸಾಲಿನಿಂದ ಎಲ್ಲಾ ವಿದ್ಯಾರ್ಥಿಗಳಿಗೆ **National Academic Depository** ಯಲ್ಲಿ ನೋಂದಣಿ ಮಾಡಿಸಿ ಅಂಕಪಟ್ಟಿ/ಪದವಿ ಪ್ರಮಾಣ ಪತ್ರ ಪಡೆಯುವಂತೆ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ ಈ ಪ್ರಕ್ರಿಯೆಯು ಇನ್ನೂ ಜನಪ್ರಿಯಗೊಳ್ಳದೇ ಇರುವುದರಿಂದ ಹಾಗೂ ಕೆಲವು ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರದ ಹಾರ್ಡ್ ಕಾಪಿ ಅತ್ಯಾವಶ್ಯಕತೆ ಇದೆಯೆಂದು ದಿನಂಪ್ರತಿ ಅರ್ಜಿಗಳು ಸಲ್ಲಿಸುತ್ತಿರುವುದನ್ನು ಪರಿಗಣಿಸಿ **National Academic Depository** ಎಲ್ಲಾ ಹಂತಗಳಲ್ಲೂ ಜನಪ್ರಿಯಗೊಳ್ಳುವವರೆಗೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಎಲ್ಲಾ ವಿದ್ಯಾರ್ಥಿಗಳಿಗೆ (ಹಾರ್ಡ್ ಕಾಪಿ) ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಅನುಮತಿಸಲಾಯಿತು.

ವಿಷಯ ಸೂಚಿ: 8: To consider the Proceedings of the Board of Studies in Psychology- reg.

ನಿರ್ಣಯ: ಜ್ಞಾನೋದಯ ಶಿವಜ್ಯೋತಿ ಟ್ರಸ್ಟ್, ಬೆಂಗಳೂರು ಇವರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮದ ಪ್ರಕರಣ 66(1)ರ ಅಡಿಯಲ್ಲಿ ಮಾನ್ಯತೆ ಪಡೆಯಲು ಅನುವಾಗಲು 2020–21ನೇ ಸಾಲಿನಿಂದ ಜಾರಿಗೆ ಬರುವಂತೆ M.Sc. in Counseling and Spiritual Health ವಿಷಯವನ್ನು ಪ್ರಾರಂಭಿಸಲು ಮನಶಾಸ್ತ್ರ ಬೋಧನಾ ಮಂಡಳಿಯ ಶಿಫಾರಸ್ಸಿನಂತೆ Faculty of Science ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ಮತ್ತು M.Sc. in Value Education and Spirituality ವಿಷಯವನ್ನು ಸಂಬಂಧಿಸಿದ ಬೋಧನಾ ಮಂಡಳಿಯಲ್ಲಿ ನಿರ್ಣಯ ಅನುಮೋದನೆ ಸೂಚಿಸಿತು.

ಕುಲಪತಿಗಳು ಮಾತನಾಡಿ ಪ್ರಸ್ತುತ ಪಿ.ಜಿ. ಡಿಪ್ಲೊಮಾ ತರಗತಿಗಳಿಗೆ ಪ್ರತ್ಯೇಕ ಶೈಕ್ಷಣಿಕ ವೇಳಾಪಟ್ಟಿ ಇದ್ದು ಪ್ರತ್ಯೇಕವಾಗಿ ಪ್ರವೇಶಗಳನ್ನು ನಡೆಸಲಾಗುತ್ತಿದೆ. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಈ ಪಿ.ಜಿ. ಡಿಪ್ಲೊಮಾ ತರಗತಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಯಾವುದೇ ರೀತಿಯ ವಿದ್ಯಾರ್ಥಿ ವೇತನ, ಹಾಸ್ಟೆಲ್ ವೆಚ್ಚ ಹಾಗೂ ಇತರ ಅನುದಾನವನ್ನು ನೀಡುತ್ತಿಲ್ಲ. ಈ ಕೋರ್ಸುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೂ ಕೂಡ ಒಂದು ಶೈಕ್ಷಣಿಕ ವರ್ಷ ನಷ್ಟವಾಗುತ್ತದೆ. ಆದಕಾರಣ ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಸ್ನಾತಕೋತ್ತರ ಕೋರ್ಸುಗಳೊಂದಿಗೆ ಈ ಪಿ.ಜಿ. ಡಿಪ್ಲೊಮಾ ಕೋರ್ಸುಗಳನ್ನು Ad-on ಕೋರ್ಸುಗಳನ್ನಾಗಿ ಮಾರ್ಪಡಿಸಿ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ನೀಡುವ ಸಮಯದಲ್ಲೇ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಿ.ಜಿ. ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ ನೀಡಿದರೆ ವಿದ್ಯಾರ್ಥಿಗಳಿಗೆ ಹಾಗೂ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುವುದೆಂದು ತಿಳಿಸಿದರು.

ದೀರ್ಘ ಚರ್ಚೆಯ ನಂತರ ಮುಂದಿನ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ನಡೆಸುವ ಪಿ.ಜಿ. ಡಿಪ್ಲೊಮಾ ಕೋರ್ಸುಗಳನ್ನು Ad-on ಕೋರ್ಸುಗಳನ್ನಾಗಿ ಮಾರ್ಪಡಿಸಲು ಹಾಗೂ ಈ ಪಿ.ಜಿ. ಡಿಪ್ಲೊಮಾ ಕೋರ್ಸುಗಳಿಗೆ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ತಮ್ಮ ಸ್ನಾತಕೋತ್ತರ ಪದವಿಯೊಂದಿಗೆ ಪಿ.ಜಿ. ಡಿಪ್ಲೊಮಾ ಕೋರ್ಸುಗಳನ್ನು Ad-on ಕೋರ್ಸಾಗಿ ಏಕಕಾಲದಲ್ಲಿ ಅಧ್ಯಯನ ಮಾಡಲು ಮಾತ್ರ ಅವಕಾಶ ನೀಡಲು ವಿದ್ಯಾವಿಷಯಕ ಪರಿಷತ್ತು ನಿರ್ಣಯಿಸಿತು.

ಕುಲಸಚಿವರು (ಮೌಲ್ಯಮಾಪನ)ರವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಸಚಿವರು 13/1/2020

16/1/2020
ಕುಲಪತಿಯವರು



8947-150 copies JAN-20

ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸಿಎ-2/ಎ2/ವಿ.ವಿ.ಪ./ಸಾ.ಸ/2019-20

ದಿನಾಂಕ: 03-02-2020

## ತಿದ್ದುಪಡಿ ನಡಾವಳಿ:

ಉಲ್ಲೇಖ: 1. ದಿನಾಂಕ:22/01/2020ರ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಎಸಿಎ-2/ಎ2/ವಿ.ವಿ.ಪ./ಸಾ.ಸಭೆ/2019-20.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29/01/2020

*****

ಉಲ್ಲೇಖ-1ರ ಸಮಸಂಖ್ಯೆಯ ಪತ್ರದಲ್ಲಿ ದಿನಾಂಕ:30/12/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಡಾವಳಿ ಸಂಖ್ಯೆ.08 ರಲ್ಲಿನ ನಿರ್ಣಯವನ್ನು-

"ಜ್ಞಾನೋದಯ ಶಿವಜ್ಯೋತಿ ಟ್ರಸ್ಟ್, ಬೆಂಗಳೂರು ಇವರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮದ ಪ್ರಕರಣ 66(1)ರ ಅಡಿಯಲ್ಲಿ ಮಾನ್ಯತೆ ಪಡೆಯಲು ಅನುವಾಗಲು 2020-21ನೇ ಸಾಲಿನಿಂದ ಜಾರಿಗೆ ಬರುವಂತೆ M.Sc. in Counselling and Spiritual Health ವಿಷಯವನ್ನು ಪ್ರಾರಂಭಿಸಲು ಮನಶಾಸ್ತ್ರ ಬೋಧನಾ ಮಂಡಳಿಯ ಶಿಫಾರಸ್ಸಿನಂತೆ Faculty of Science ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ಮತ್ತು M.Sc. in Value Education and Spirituality ವಿಷಯವನ್ನು ಸಂಬಂಧಿಸಿದ ಬೋಧನಾ ಮಂಡಳಿಯಲ್ಲಿ ನಿರ್ಣಯ ಅನುಮೋದನೆ ಸೂಚಿಸಿತು".

ಎಂಬುದರ ಬದಲಾಗಿ ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

"ಜ್ಞಾನೋದಯ ಶಿವಜ್ಯೋತಿ ಟ್ರಸ್ಟ್, ಬೆಂಗಳೂರು ಇವರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮದ ಪ್ರಕರಣ 66(1)ರ ಅಡಿಯಲ್ಲಿ ಮಾನ್ಯತೆ ಪಡೆಯಲು ಅನುವಾಗಲು 2020-21ನೇ ಸಾಲಿನಿಂದ ಜಾರಿಗೆ ಬರುವಂತೆ M.Sc. in Counselling and Spiritual Health ವಿಷಯವನ್ನು ಪ್ರಾರಂಭಿಸಲು ಮನಶಾಸ್ತ್ರ ಬೋಧನಾ ಮಂಡಳಿಯ ಶಿಫಾರಸ್ಸಿನಂತೆ Faculty of Science ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ಅನುಮೋದನೆ ನೀಡಲು ನಿರ್ಣಯಿಸಿತು".

ಆದೇಶದ ಮೇರೆಗೆ,

ಕುಲಸಚಿವರು
4/2/2020.

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿಯವರು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು - 01.
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು - 01.
3. ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು/ಉಪಕುಲಸಚಿವರು/ಸಹಾಯಕ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು - ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.